ಬಿ) ಬೇಲೂರಿನ ಸಬ್-ಇನ್ಸ್‌ಪೆಕ್ಟರ್‌ರವರ ವರ್ತನೆಯ ಕುರಿತು

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :— ಮಾನ್ಯ ಅಧ್ಯಕ್ಷರೆ, ನಾನು ಈಗ ಪ್ರಸ್ತಾಪಿಸಬೇಕೆಂದಿರುವ ವಿಷಯವನ್ನು ಅತ್ಯಂತ ಬೇಸರದಿಂದ ವಿಧಿಯಿಲ್ಲದೆ ಹೇಳುತ್ತಿದ್ದೇನೆ. ಈ ವಿಚಾರವನ್ನು ಈಗಾಗಲೇ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಹಾಗೂ ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ನಮ್ಮ ಜಿಲ್ಲೆಯಾದ ಬೇಲೂರಿನಲ್ಲಿ ನಾಗರಾಜ್ ಅಣ್ಣೇಗೌಡ ಎಂಬ ಒಬ್ಬ ಸಬ್ ಇನ್ಸ್‌ಪೆಕ್ಟರ್ ಇದ್ದು, ಅವರ ವರ್ತನೆ ಹೇಗಿದೆಯೆಂದರೆ ಇಡೀ ಕರ್ನಾಟಕ ಸರ್ಕಾರದಲ್ಲಿ ಅವರಿಗಿಂತ ಮೇಲ್ಪಟ್ಟ ಅಧಿಕಾರಿಗಳು ಬೇರಾರೂ ಇಲ್ಲ! ಅವರೇ ನಂ. 1 ಆಗಿದ್ದಾರೆ. ಅವರಿಗೆ ಸರ್ಕಲ್ ಇನ್ಸ್‌ಪೆಕ್ಟರ್ ಆಗಲಿ, ಎಸ್.ಪಿ.ಯಾಗಲಿ, ಹೋಮ್ ಮಿನಿಸ್ಟರ್ ಆಗಲಿ ಯಾರೂ ಸಂಬಂಧವಿಲ್ಲ! ಇನ್ನೊಂದು ವಿಷಯವೇನೆಂದರೆ, ಅವರಲ್ಲಿರುವ ದುರ್ಗುಣವೋ, ಸುಗುಣವೋ ಗೊತ್ತಿಲ್ಲ. ಏನೆಂದರೆ, ಬಿ.ಜೆ.ಪಿ. ಎಂಬ ಶಬ್ದ ಕೇಳಿದರೆ ಸಾಕು ಆ ಮನುಷ್ಯರಿಗೆ ಅಲರ್ಜಿಯುಂಟಾಗುತ್ತದೆ. ಕೊಬ್ಬಿದ ಗೂಳಿಗೆ ಕೆಂಪು ಬಟ್ಟೆ ಕಂಡರೆ ಹೇಗೆ ಮೇಲೆ ಬೀಳುವುದೋ ಹಾಗೆ ಬಿಜೆಪಿ ಕಾರ್ಯಕರ್ತರನ್ನು ಕಂಡರೆ ಈ ಮನುಷ್ಯ ಅವರ ಮೇಲೆ ಹೋಗಿ ಬೀಳುತ್ತಾರೆ. ಇದೇಕೆ ಎಂಬುದು ನನಗೆ ಗೊತ್ತಿಲ್ಲ. ಕಳೆದ ಲೋಕಸಭಾ ಚುನಾವಣೆಯಿಂದ ಈತನ ಉಪಟಳ ಜಾಸ್ತಿಯಾಗಿದೆ. ಆತನನ್ನು ಮಾತನಾಡಿದಿಸಿದರೆ ಒಂದು ಜೇಬಿನಿಂದ ಮಾಜಿ ಪ್ರಧಾನಿಯನ್ನು ತೆಗೆಯುತ್ತಾನೆ, ಮತ್ತೊಂದು ಜೇಬಿನಿಂದ ಜಿಲ್ಲಾ ಉಸ್ತುವಾರಿ ಮಂತ್ರಿಯನ್ನು ತೆಗೆಯುತ್ತಾನೆ. ಅವರಿಬ್ಬರನ್ನು ತನ್ನ ಎರಡೂ ಜೇಬುಗಳಲ್ಲಿಟ್ಟುಕೊಂಡಿದ್ದಾನೆ ಬೇರಾರೂ ಮಾತನಾಡುವಂತಿಲ್ಲ. ಅಷ್ಟರ ಮಟ್ಟಿಗೆ ಆತನ ವರ್ತನೆ ಇದೆ. ಬೇಲೂರಿನಲ್ಲಿ 18 ಜನ ಬಿ.ಜೆ.ಪಿ. ಕಾರ್ಯಕರ್ತರಿದ್ದು ಪೊಲೀಸ್ ಇಲಾಖೆಯಲ್ಲಿ ಮೊಕದ್ದಮೆ ಹೂಡಲು ಕಾನೂನಿನಲ್ಲಿ ಯಾವ್ಯಾವ ಸೆಕ್ಷನ್‌ಗಳಿವೆಯೋ ಅಷ್ಟೂ ಸೆಕ್ಷನ್‌ಗಳನ್ನು ಉಪಯೋಗಿಸಿ ಅವರ ಮೇಲೆ ಕೇಸ್ ಹಾಕುತ್ತಿದ್ದಾರೆ. ಗೃಹಮಂತ್ರಿಗಳಾದ ತಾವುಗಳು ಕರೆಸಿ ಮಾತನಾಡಬೇಕು. ಬೇಲೂರಿಗೆ ಮೊನ್ನೆ ದಿವಸ ನಮ್ಮ ಪಕ್ಷದ ಸಂಕಲ್ಪ ಯಾತ್ರೆ ಬಂದಂಥ ಸಂದರ್ಭದಲ್ಲಿ ಯಾತ್ರೆಯ ವ್ಯವಸ್ಥೆ ಮಾಡಿದ್ದ ಒಬ್ಬ ಪ್ರಮುಖ ಕಾರ್ಯಕರ್ತರು ಕಾರನ್ನು ದುರಸ್ತಿ ಮಾಡಿಸುವ ಸಲುವಾಗಿ ಮುಖ್ಯ ರಸ್ತೆಯಲ್ಲಿರುವ ಒಂದು ವರ್ಕ್‌ಶಾಪ್ ಮುಂದೆ ತಂದು ನಿಲ್ಲಿಸಿದರು. ಸಮಸ್ಯೆಯೇನೆಂದರೆ, ಕಾರು ಸ್ಟಾರ್ಟ್ ಆಗುತ್ತಿರಲಿಲ್ಲ. ವರ್ಕ್‌ಶಾಪ್‌ನಲ್ಲಿರುವವರು ಬ್ಯಾಟರಿಯನ್ನು ಜೆಕ್ ಮಾಡಲು ಕಾರಿನಿಂದ ಬಿಚ್ಚಿ ತೆಗೆದುಕೊಂಡು ಹೋಗಿರುವ ಸಮಯದಲ್ಲಿ ಆ ಸಬ್ ಇನ್ಸ್‌ಪೆಕ್ಟರ್ ಬಂದು ಸ್ಥಳದಿಂದ ಕಾರನ್ನು ತೆಗೆಯಬೇಕೆಂದು ಹೇಳಿದ್ದಾರೆ. ಆಗ ಅವರು ಬ್ಯಾಟರಿಯನ್ನು ಚೆಕ್ ಮಾಡಲು ತೆಗೆದುಕೊಂಡು ಹೋಗಿರುವುದರಿಂದ ಅದನ್ನು ತಂದು ಪುನಃ ಕಾರಿಗೆ ಅಳವಡಿಸಿದ ನಂತರ ಕಾರನ್ನು ತೆಗೆಯುವುದಾಗಿ ಹೇಳಿದಾಗ ಅವರ ಕೈಗೆ ಲಾಠಿಯಿಂದ ಹೊಡೆದಿದ್ದಾರೆ. ಇದರಿಂದಾಗಿ ಅತನ ಕೈ ಫ್ರಾಕ್ಚರ್ ಆಗಿದೆ. ಮುಖ್ಯ ರಸ್ತೆಯಲ್ಲಿ ವರ್ಕ್‌ಶಾಪ್ ಇದ್ದು ಅದರ ಎದುರಿನಲ್ಲೇ ದುರಸ್ತಿಗಾಗಿ ಕಾರು ನಿಲ್ಲಿಸಿರುವುದು ತಪ್ಪು ಎನ್ನುವುದಾದರೆ ಮುಖ್ಯ ರಸ್ತೆಯಲ್ಲಿ ವರ್ಕ್‌ಶಾಪ್‌ಗೆ ಏಕೆ ಅನುಮತಿ ಕೊಟ್ಟರು? ಆದುದರಿಂದ, ಇವೊತ್ತು

ನಿಮ್ಮನ್ನು ಒತ್ತಾಯಿಸುವುದೇನೆಂದರೆ, ಲೋಕಸಭಾ ಚುನಾವಣೆ ಹತ್ತಿರ ಬರುತ್ತಿದೆ. ಚುನಾವಣಾ ಸಂದರ್ಭದಲ್ಲಿ ನಮ್ಮ ಪಕ್ಷದ ಕಾರ್ಯಕರ್ತರನ್ನು ಆತ ಖಂಡಿತಾ ಬಿಡುವುದಿಲ್ಲ. ಆ ಸಬ್ ಇನ್ಸ್‌ಪೆಕ್ಟರ್ ಹೇಳಿದಂಥ ಮಾತುಗಳನ್ನು ನಾನು ಈ ಸದನದಲ್ಲಿ ಹೇಳಲು ಇಷ್ಟಪಡುವುದಿಲ್ಲ. ಹೇಳಿದರೆ ಅದರಿಂದ ನಮ್ಮ ಘನತೆ ಕಡಿಯಮಾಗುತ್ತದೆ. ಅದರ ಬಗ್ಗೆ ತಮ್ಮಲ್ಲಿಗೆ ಬಂದು ಹೇಳುತ್ತೇನೆ. ಅಷ್ಟು ಕೆಳಮಟ್ಟದಲ್ಲಿ ಆತ ಭಾಷೆಯನ್ನು ಉಪಯೋಗಿಸುತ್ತಾನೆ. ಆತನನ್ನು ಆ ಸ್ಥಳದಿಂದ ತಕ್ಷಣ ಬೇರೆಡೆಗೆ ವರ್ಗಾಯಿಸಬೇಕು. ಇಲ್ಲವೆಂದರೆ, ತಾವು ಒಂದು ಕೆಲಸ ಮಾಡಬೇಕು. ಏನೆಂದರೆ, ಭಾರತೀಯ ಜನತಾ ಪಾರ್ಟಿಯ ಕಾರ್ಯಕರ್ತರು ಬೇಲೂರಿನಲ್ಲಿ ಯಾರೂ ಮಾತನಾಡಬಾರದು, ಅವರು ಬಿ.ಜೆ.ಪಿ. ಎಂದು ಹೇಳಿಕೊಳ್ಳಬಾರದು ಎನ್ನುವುದಾದರೆ ಒಂದು ಆದೇಶ ಹೊರಡಿಸಬೇಕು! ಇವರಿಬ್ಬರಲ್ಲಿ ತಮಗೆ ಯಾವುದು ಸುಲಭವೆನಿಸುತ್ತದೋ ಅದನ್ನು ತಾವು ಮಾಡಬಹುದಾಗಿದೆ. ಏಕೆಂದರೆ, ಆ ಮನುಷ್ಯನ ತಲೆಯಲ್ಲಿ ವಿನಿದೆಯೋ ಗೊತ್ತಿಲ್ಲ. ಆತ ಒಬ್ಬ ಹುಚ್ಚನೆಂದು ಇಲಾಖೆಯವರು ಹೇಳುತ್ತಾರೆ. ಈ ಹುಚ್ಚನನ್ನು ಸಬ್ ಇನ್ಸ್‌ಪೆಕ್ಟರ್ ಆಗಿ ಮಾಡಿದರೆ ಏನಾಗುತ್ತದೆಂಬುದನ್ನು ಯೋಚಿಸಬೇಕು. ಇದರ ಜೊತೆಗೆ ಕಳೆದ ನಾಲ್ಕೈದು ವರ್ಷಗಳಿಂದಲೂ ಒಂದೇ ಜಾಗದಲ್ಲಿದ್ದಾನೆ. ಹಳೇಬೀಡು ಬಿಟ್ಟರೆ ಬೇಲೂರಿಗೆ, ಬೇಲೂರು ಬಿಟ್ಟರೆ ಹಳೇಬೀಡಿಗೆ, ಹೀಗೆಯೇ ಐದು ವರ್ಷಗಳ ಕಾಲ ಅಲ್ಲಿಯೇ ಕಳೆದಿದ್ದಾನೆ. ಆದುದರಿಂದ, ಮಾನ್ಯ ಗೃಹ ಮಂತ್ರಿಗಳು ಏನಾದರೂ ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರೆ ಮುಂದೆ ನಾನು ಏನಾದರೂ ಮಾತನಾಡಲು ಇಚ್ಛಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಶಿವಪ್ಪನವರು ಈ ಕುರಿತು ಎಲ್ಲಾ ವಿಚಾರಗಳನ್ನು ಹೇಳಿರುವುದರಿಂದ, ಈ ರೀತಿಯಾದ ಕೆಲವು ಎಲಿಮೆಂಟ್ಸ್ ಪೊಲೀಸ್ ಇಲಾಖೆಯಲ್ಲಿದ್ದಾರೆ, ಇಲ್ಲವೆಂದು ನಾನು ಹೇಳುವುದಿಲ್ಲ. ತಾವು ಅದರ ವಿವರಗಳನ್ನು ಕೊಟ್ಟಿರುವುದರಿಂದ ಅದರ ಬಗ್ಗೆ ಸಂಬಂಧಪಟ್ಟ ಹಿರಿಯ ಪೊಲೀಸ್ ಅಧಿಕಾರಿಗಳ ಮೂಲಕ ತನಿಖೆ ಮಾಡಿಸಿ ಅವರ ಮೇಲೆ ಕ್ರಮಕ್ಕೆಗೊಳ್ಳುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ಸಚಿವರು ಆ ಕುರಿತು ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ, ಸಂತೋಷ. ಈ ವಿಷಯವನ್ನು ನಾನು ಕಳೆದ 2-3 ಅಧಿವೇಶನದ ಸಮಯದಲ್ಲಿ ಪ್ರಸ್ತಾಪಿಸಿರಲಿಲ್ಲ. ನಾನು ಪ್ರಸ್ತಾಪಿಸಿದರೆ ವಿಷಯ ಹೊರಗಡೆ ಬಂದು ಅಲ್ಲಿರುವ ನಮ್ಮ ಪಕ್ಷದ ಕಾರ್ಯಕರ್ತರಿಗೆ ಆತ ಹಿಂಸೆ ಕೊಡುತ್ತಾನೆಂದು ತಿಳಿದುಕೊಂಡೇ ಇಲ್ಲಿಯವರೆವಿಗೂ ಸುಮ್ಮನಿದ್ದೆ. ವಿಧಿಯಿಲ್ಲದೆ ಇವೊತ್ತು ನಾನು ಪ್ರಸ್ತಾಪಿಸಿರುವುದರಿಂದ ಅಲ್ಲಿ ಇನ್ನು ಮುಂದೆ ಇಂತಹ ಪ್ರಸಂಗ ಜರುಗುವುದಕ್ಕೆ ಅವಕಾಶವಿರಬಾರದು.

ಶ್ರೀ ಪಿ.ಜಿ.ಆರ್. ಸಿಂಧ್ಯ :— ನೀವೊಬ್ಬರಷ್ಟೇ ಅಲ್ಲ, ಬಿ.ಜೆ.ಪಿ. ಇರಲಿ, ಕಾಂಗ್ರೆಸ್ ಇರಲಿ, ವಿರೋಧ ಪಕ್ಷದ ಯಾವುದೇ ಸದಸ್ಯರಿರಲಿ, ಮತ್ತೊಬ್ಬರಿರಲಿ,

ಯಾವುದೇ ಪಕ್ಷದ ಕಾರ್ಯಕರ್ತರಿಗೂ ಈ ರೀತಿ ಹಿಂಸೆ ಕೊಡುವುದು ದೊಡ್ಡ ಅಪರಾಧವಾಗುತ್ತದೆ. ಸರ್ಕಾರ ಇದನ್ನು ಯಾವುದೇ ರೀತಿಯಲ್ಲೂ ಕ್ಷಮಿಸುವುದಿಲ್ಲ. It is a very serious matter. I will take action and I will see that such incident do not repeat.

(ಅ) ಕೊಯ್ನ ಮತ್ತು ಘಟಪ್ರಭ ಅಚ್ಚುಕಟ್ಟು ಪ್ರದೇಶಗಳಲ್ಲಿ ಹಿನ್ನೀರಿನ ಒತ್ತಡ ಹೆಚ್ಚಾಗುತ್ತಿದ್ದು ಅಲ್ಲಿನ ಗ್ರಾಮಸ್ಥರಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸಿಕೊಡುವ ಬಗ್ಗೆ

+ಶ್ರೀ ಪ್ರಹ್ಲಾದ ಹನುಮಂತಪ್ಪ ಪೂಜಾರ್ (ಬಾಗಲಕೋಟಿ) :— ಸನ್ಮಾನ್ಯ ಅಧ್ಯಕ್ಷರೆ, ಕಳೆದ 10-15 ದಿವಸಗಳಿಂದ ಕೊಯ್ನಾ ಮತ್ತು ಘಟಪ್ರಭಾ ಅಚ್ಚುಕಟ್ಟು ಪ್ರದೇಶಗಳಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಆಲಮಟ್ಟಿ ಅಣೆಕಟ್ಟು ತುಂಬಿ ಹರಿಯುತ್ತಿದೆ. ಅಣೆಕಟ್ಟಿನ 509 ಅಡಿಗಳವರೆಗೆ ತುಂಬಿದ ನೀರು ಹೆಚ್ಚಾದಂತೆ ಹೊರಬಿದ್ದು ಮಹಾಪೂರದಂತೆ ಹರಿದು ಹೋಗುತ್ತಿದ್ದು, ಇದರಿಂದ ಸಹಜವಾಗಿಯೇ ಹಿನ್ನೀರಿನ ಒತ್ತಡ ಇವೊತ್ತು ಹೆಚ್ಚಾಗುತ್ತಿದ್ದು, ಇದೇ ಪ್ರಮಾಣದಲ್ಲಿ ನೀರು ಹರಿದು ಬಂದರೆ ಅನೇಕ ಹಳ್ಳಿಗಳು ಮುಳುಗಡೆಯಾಗುತ್ತವೆಂದೂ ಹಾಗೂ ಮುಳುಗಡೆಯಾಗಬಹುದಾದ ಹಳ್ಳಿಗಳನ್ನು ಪಟ್ಟಿ ಮಾಡಿದ್ದು, ಆ ಪಟ್ಟಿಯಲ್ಲಿ ಬಾಗಲಕೋಟೆ ಮಹಾನಗರವಲ್ಲದೆ ಅದರ ಸುತ್ತಮುತ್ತಲಿರುವ ಹಳ್ಳಿಗಳೂ ಸಹ ಇದ್ದು, ಈ ಹಳ್ಳಿಗಳಿಗೆ ಮಹಾಪೂರದ ನೀರು ನುಗ್ಗಿ ಹಾನಿಯುಂಟಾಗುತ್ತದೆಂದು ಪುನರ್ವಸತಿ ಅಧಿಕಾರಿಗಳು ಪತ್ರಿಕೆಗಳ ಮೂಲಕ ಈಗಾಗಲೇ ಪ್ರಕಟಣೆ ಹೊರಡಿಸಿದ್ದಾರೆ. ಇಲ್ಲೊಂದು ಆಶ್ಚರ್ಯ ಅಥವಾ ಕುಚೋದ್ಯವೆಂದು ಹೇಳಬಹುದು. ಪ್ರಕಟಣೆಯ ಪಟ್ಟಿಯಲ್ಲಿದ್ದ ಸುಮಾರು 7-8 ಹಳ್ಳಿಗಳಿಗೆ ಸಂಬಂಧಿಸಿದಂತೆ ಸರ್ಕಾರ ಇದುವರೆವಿಗೂ ಪರಿಹಾರಧನ ನೀಡಿಲ್ಲ ಮತ್ತು ಪುನರ್ವಸತಿ ಕೇಂದ್ರಗಳನ್ನು ಗುರ್ತಿಸಿ ಜನರಿಗೆ ನಿವೇಶನ ಸೌಲಭ್ಯವನ್ನು ಸಹ ಇಲ್ಲಿಯವರೆಗೆ ನೀಡಿಲ್ಲ. ಉದಾಹರಣೆಗೆ ಹೇಳುವುದಾದರೆ, ಬಾಗಲಕೋಟೆ ತಾಲ್ಲೂಕಿನ ಮಲ್ಲಾಪುರ, ಗದಾಂಪುರ, ಮುರ್ನಾಳ್, ಸೋರೆಕೊಪ್ಪ, ಯಡಹಳ್ಳಿ, ಚಬ್ಬಿ ಮುಂತಾದ ಹಳ್ಳಿಗಳಿಗೆ ಸಂಬಂಧಿಸಿದಂತೆ ಪರಿಹಾರ ಧನವನ್ನು ಇನ್ನೂ ನೀಡಿಲ್ಲ, ಅಲ್ಲದೆ, ಪುನರ್ವಸತಿ ಕೇಂದ್ರಗಳನ್ನೂ ಸಹ ಗುರ್ತಿಸಿರುವುದಿಲ್ಲ. ಇದರ ಜೊತೆಗೆ ಆಲಮಟ್ಟಿ ಅಣೆಕಟ್ಟಿನ ಹಿನ್ನೀರಿನಲ್ಲಿ ಬಾಗಲಕೋಟೆ ನಗರದ ಸುಮಾರು 3,567 ಕಟ್ಟಡಗಳು ಮುಳುಗಡೆಯಾಗುವುದೆಂದು ಸರ್ಕಾರ ಗುರ್ತಿಸಿದ್ದರೂ ಮುಳುಗಡೆಯಾಗುವ ಸಾವಿರಾರು ಕಟ್ಟಡಗಳಿಗೆ ಪರಿಹಾರ ಧನ ವಿತರಿಸಿಲ್ಲ, ಮತ್ತು ಅಲ್ಲಿನ ಜನರಿಗೆ ನಿವೇಶನವನ್ನೂ ನೀಡಿಲ್ಲ. ಮುಳುಗಡೆಯಾಗುವ ಪ್ರದೇಶದಲ್ಲಿ ನೂರಾರು ವರ್ಷಗಳಿಂದ ಬಾಡಿಗೆದಾರರಾಗಿ ಬದುಕುತ್ತಿರುವವರಿಗೂ ಸರ್ಕಾರ ಯಾವುದೇ ರೀತಿಯಾದ ಪುನರ್ವಸತಿಯ ನಿವೇಶನ ಸೌಲಭ್ಯ ಒದಗಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಬಾಗಲಕೋಟೆ ಹಾಗೂ ಆ ತಾಲ್ಲೂಕಿನ ಜನರು ರೊಚ್ಚಿಗೆದ್ದು ಅನೇಕ ವರ್ಷಗಳಿಂದ ಸರ್ಕಾರದ ಮುಂದೆ ನಮ್ಮ ಅಹವಾಲುಗಳನ್ನು ಹೇಳುತ್ತಾ ಬೇಡಿಕೆಗಳನ್ನು ಮಂಡಿಸುತ್ತಾ ಬಂದಿದ್ದರೂ ಸರ್ಕಾರ ಸೂಕ್ತ ಕ್ರಮಕ್ಕೆಗೊಳ್ಳದಿರುವುದರಿಂದ ಜನರು ಒಂದು